# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 712
ಸದಸ್ಯರ ಹೆಸರು : ಡಾ|| ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 21.08.2026
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯನ್ನು ಆರಂಭದಲ್ಲಿ ಎಷ್ಟು ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲಾಗಿತ್ತು; ಈವರೆಗೆ ಖರ್ಚಾದ ಒಟ್ಟು ವೆಚ್ಚ ಎಷ್ಟು: (ವಿವರ ನೀಡುವುದು)</td><td>ಕಾರಂಜಾ ಯೋಜನೆಯನ್ನು 1969-70ರಲ್ಲಿ ಪ್ರಾರಂಭಿಸಲಾಗಿದ್ದು, 1967-68ರ ದರಪಟ್ಟಿಯನ್ವಯ ಮೂಲ ಅಂದಾಜು ಮೊತ್ತ ರೂ.9.90 ಕೋಟಿ ಇರುತ್ತದೆ. ಈ ಯೋಜನೆಗೆ ಸರ್ಕಾರವು ದಿನಾಂಕ:27.11.1969ರಂದು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.<br><br>2012-13ರ ದರಪಟ್ಟಿಯನ್ವಯ ಸದರಿ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.635.18 ಕೋಟಿಗಳಿಗೆ ಸರ್ಕಾರದ ಆದೇಶ ದಿನಾಂಕ:02.01.2015ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಯೋಜನೆಗೆ ರೂ.723.13 ಕೋಟಿ ವೆಚ್ಚವನ್ನು ಭರಿಸಲಾಗಿರುತ್ತದೆ.</td></tr>
<tr><td>ಆ)</td><td>ಕಾಮಗಾರಿ ಪೂರ್ಣಗೊಳಿಸಲಾಗಿದೆಯೇ: ಅಥವಾ ಇಲ್ಲವೇ: ಪೂರ್ಣಗೊಳ್ಳದಿರಲು ಕಾರಣಗಳೇನು: (ವಿವರ ನೀಡುವುದು)</td><td rowspan="2">ಸದರಿ ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, 27,266 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.<br><br>ಬಾಕಿ 1961 ಹೆಕ್ಟೇರ್ ಪ್ರದೇಶವನ್ನು, ಭೂಸ್ವಾಧೀನ ಸಮಸ್ಯೆ, ರೈತರು ಬೋರ್‌ವೆಲ್ & ತೆರೆದ ಬಾವಿಗಳಿಂದ ಹಾಗೂ ಕಾರಂಜಾ ಜಲಾಶಯದ ಹಿನ್ನೀರಿನಿಂದ ನೇರವಾಗಿ ನೀರಾವರಿ ಕಲ್ಪಿಸಿಕೊಂಡಿರುವುದರಿಂದ, ಯೋಜನೆಯಿಂದ ಕೈಬಿಡಲಾಗಿದೆ.</td></tr>
<tr><td>ಇ)</td><td>ಒಟ್ಟು ಎಷ್ಟು ಎಕರೆಗೆ ಈ ಯೋಜನೆಯಿಂದ ನೀರು ತಲುಪುತ್ತಿದೆ?</td></tr>
</table>

ಜಸಂಇ 102 ಎಂಎಲ್ ಎ 2026

(ಎನ್. ಚಲುವರಾಯಸ್ವಾಮಿ)
ಜಲಸಂಪನ್ಮೂಲ ಸಚಿವರು